ಲೇಖನ 02

# ಶ್ರೀ ಅಯ್ಯಪ್ಪ, ಭದ್ರಕಾಳಿ, ಬೋಟೆ ಕರುಂಬ, ದೇವರಕಾಡು,ದೇವರಪುರ, ಕೊಡಗು ಜಿಲ್ಲೆ, ಕರ್ನಾಟಕ. (ದೇವರ ಕಾಡಿನಲ್ಲಿ ನಡೆಯುವ ಆಚಾರ ವಿಚಾರಗಳು)

ಅಯ್ಯಪ್ಪ ದೇವಕಾಡು, ದೇವರಪುರ ಗ್ರಾಮದಲ್ಲಿದ್ದು ಈ ದೇವಕಾಡನ್ನು ಕೊಡವ ಜನಾಂಗದವರು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಈ ದೇವಕಾಡಿನಲ್ಲಿ ವರ್ಷಕ್ಕೊಮ್ಮೆ ಹಬ್ಬವನ್ನು ಆಚರಿಸಲಾಗುವುದು. ಇಲ್ಲಿನ ಬೊಟ್ಟ ಕುರುಬ ಜನಾಂಗದವರ ಪ್ರಾಮುಖ್ಯತೆ ದೇವಕಾಡಿಗಿದೆ. ಅಯ್ಯಪ್ಪ, ಭದ್ರಕಾಳಿ, ಬೋಟೆ ಕರುಂಬ, ದೇವರುಗಳಿಗೆ ಹರಕೆ ಹೊತ್ತ ನಾನಾ ವೇಷಧಾರಿ ಭಕ್ತರು ಊರಿನ ಮನೆ ಮನೆಗಳಿಗೆ ತೆರಳಿ ದೇವರಿಗೆ ಕಾಣಿಕೆ ಬೇಡುವರು.



ಹಿಂದಿನ ಕಾಲದಲ್ಲಿ ಮಳೆ ಜಾಸ್ತಿ ಆಗುತ್ತಿತ್ತು, ಪ್ರಸ್ತುತ ಮಳೆ ಬಹಳ ಕಡಿಮೆ. ಹೊರಗಿನವರು ಬಂದು ದೇವಕಾಡನ್ನು ಆಕ್ರಮಿಸಿಕೊಂಡು ಕಾಡನ್ನು ನಾಶಮಾಡುತ್ತಿದ್ದಾರೆ.

ಪ್ರಸ್ತುತ ಈ ದೇವಕಾಡನ್ನು ಸಂರಕ್ಷಿಸುವುದೇ ಗ್ರಾಮಸ್ಥರ ಆದ್ಯ ಕರ್ತವ್ಯವಾಗಿದೆ. ಈ ದೇವಕಾಡನ್ನು ಉಳಿಸಿ ಬೆಳೆಸುವುದೇ ಊರಿನ ಆಶಯವಾಗಿದೆ. ಹಿಂದೆ ನಿಟ್ಟಾ ಯೋಜನೆಯಲ್ಲಿ 35 ಎಕರೆಗೆ ಮರಗಿಡಗಳನ್ನು ನೆಟ್ಟಿರುತ್ತಾರೆ. 1897 ರಲ್ಲಿ 186 ಎಕರೆ ಇದ್ದ ದೇವಕಾಡು ಪ್ರಸ್ತುತ ಈ ದೇವಕಾಡನ್ನು ಪೈಸಾರಿಯೆಂದು ನಮೂದಿಸಿರುತ್ತಾರೆ. ಪ್ರಸ್ತುತ 136 ಎಕರೆ ಇದೆ. ಹಿಂದಿನಿಂದಲೂ ಬಹಳ ಶ್ರದ್ಧಾಭಕ್ತಿಯಿಂದ ಪೂಜೆ ನಡೆಯುತ್ತಿದೆ. ಈ ದೇವಕಾಡಿನಲ್ಲಿ ಬಹಳ ಶಕ್ತಿಯುತವಾಗಿರುವಂತಹ ಭದ್ರಕಾಳಿ, ಐಯ್ಯಪ್ಪ, ಬೇಟೆಕಾರುಂಬ ಎಂದು ಮೂರು ದೇವರುಗಳಿದ್ದು, ಈ ದೇವಕಾಡಿಗೆ ಅಪಾರ ಶಕ್ತಿಯಿದೆ.

ಕೊಡವ ರಾಜನ ಆಡಳಿತದಲ್ಲಿ ಬಂದ ದೇವಕಾಡು ಇದಾಗಿದೆ. ಟಿಪ್ಪು ಕೆಲವು ವಸ್ತುಗಳನ್ನು ಕೆರೆಗೆ ಹಾಕಿರುತ್ತಾರೆಂದು ತಿಳಿದುಬಂದಿದೆ. ಬ್ರಿಟೀಷರ ಕಾಲದಲ್ಲಿ ಕಾಡನ್ನು ದೇವಕಾಡು ಎಂದು ಪರಿವರ್ತಿಸಲಾಗಿದೆ. ಈ ದೇವಕಾಡು ಒಂದು ಕಾಲದಲ್ಲಿ ಸರ್ಕಾರದ ಆಳ್ವಿಕೆಯಲ್ಲಿತ್ತು. ಅದಾದ ಮೇಲೆ ಅರಣ್ಯ ಅಧಿಕಾರಿಗಳ ಪಾಲಾಗಿತ್ತು. ಈಗಲೂ ರೇಂಜ್ ಫಾರೆಸ್ಟ್ ಅಧಿಕಾರಿಗಳ ಅಡಿಯಲ್ಲಿ ಇದೆ. ಕಾದ್ಯಾರ್ 8 ಕ್ಕೆ ಇಲ್ಲಿ ಹಬ್ಬ ನಡೆಯುತ್ತದೆ.

ಈ ಹಬ್ಬಕ್ಕೆ ಬೋಡು/ಬೇಡು ಹಬ್ಬವೆಂದೇ ಕರೆಯುತ್ತಾರೆ. ಹಿಂದೆ ಬೊಳ್ಳಜಿರ ಕುಟುಂಬದವರು ಈ ದೇವಕಾಡಿನ ನಿರ್ವಹಣೆಯನ್ನು ನಡೆಸುತ್ತಿದ್ದರು, ನಂತರ ಸಣ್ಣುವಂಡ ಕುಟುಂಬಸ್ಥರು ನಿರ್ವಹಿಸುತ್ತಿದ್ದಾರೆ.

ತಲೆತಲಾಂತರಗಳಿಂದ ಆಚರಿಸಿಕೊಂಡು ಬರುತ್ತಿರುವ ಈ ವಿಶೇಷ ಹಬ್ಬದ ಉದ್ದೇಶ ಪ್ರತೀತಿಯ ಮೂಲಕ ತಕ್ಕ ಮುಖ್ಯಸ್ಥರಾದ ಸಣ್ಣುವಂಡ ಕುಟುಂಬಸ್ಥರು ಹಾಗೂ ಊರಿನ ಹಿರಿಯರು ಹೇಳುವಂತೆ ಕೊಡಗಿನಲ್ಲಿ ಇರುವ ಕಾಡುಗಳಲ್ಲಿ ಕೆಲವು ಕಾಡುಗಳನ್ನು ಹಿಂದಿನಿಂದಲೂ 'ದೇವರ ಕಾಡು' ಎಂದು ಘೋಷಿಸುತ್ತಾ ದಟ್ಟ ಮರಗಳಿಂದ ಕಾಡನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಯ್ಯಪ್ಪ, ಭದ್ರಕಾಳಿ ಮತ್ತು ಬೋಟೆ ಕರುಂಬ ದೇವರನ್ನು ಪೂಜಿಸುತ್ತಾ ಕಾಡಿನ ಬಗ್ಗೆ ಪ್ರೀತಿ ಮತ್ತು ಕಾಡಿನ ಬೆಲೆಬಾಳುವ ಮರ ಸಂಪತ್ತುಗಳನ್ನು ನಾಶಪಡಿಸದೆ ಸಂರಕ್ಷಿಸುವ ಕಾಳಜಿಯಿಂದ ಊರಿನವರು ಆಯಾಯ ದೇವರಕಾಡುಗಳಲ್ಲಿ ಬೋಡು ಹಬ್ಬವನ್ನು ಆಚರಿಸುತ್ತಾರೆ.

ಹಬ್ಬವನ್ನು ಮುಖ್ಯವಾಗಿ ಸಣ್ಣುವಂಡ ಕುಟುಂಬಸ್ಥರು ತಕ್ಕ ಮುಖ್ಯಸ್ಥರಾಗಿ ನಡೆಸುತ್ತಾ ಬರುತ್ತಿದ್ದಾರೆ. ಪ್ರಸಕ್ತ ಸಣ್ಣುವಂಡ ಕುಶಾಲಪ್ಪ ಮುಖ್ಯ ತಕ್ಕರಾಗಿರುತ್ತಾರೆ, ಸಣ್ಣುವಂಡ ರಜನ್ ತಿಮ್ಮಯ್ಯ, ಅಜನಿತಂಡ ತಿಮಯ್ಯ ಅಚ್ಚಯ್ಯ ದೇವಸ್ಥಾನ ಸಮಿತಿ ಮುಖ್ಯಸ್ಥರಾಗಿ ಇತರರ ಸಹಕಾರದಿಂದ ದೇವರ ಕಾರ್ಯ ಹಾಗೂ ದೇವಕಾಡಿನ ರಕ್ಷಣೆ ನಿರ್ವಹಿಸುತ್ತಿದ್ದಾರೆ.

ಸಣ್ಣುವಂಡ ಕುಟುಂಬಸ್ಥರಿಗೆ ಊರಿನ ಇತರ ಕುಟುಂಬಸ್ಥರಾದ ಕಳ್ಳಿಚಂಡ, ಮನೆಯಪಂಡ, ಚೆಕ್ಕೇರ, ಅಜ್ಜಿನಿಕಂಡ, ಕಂಜಿತಂಡ ಸಹಕಾರ ನೀಡುತ್ತಿದ್ದು, ಊರಿನ ಸಹಬಾಳ್ವೆಗೆ ಸಾಕ್ಷಿಯಾಗಿರುತ್ತದೆ. ಹಾಗೆಯೇ ಕೊಡಗಿನ ಮೂಲ ನಿವಾಸಿಗಳಾದ ಬೊಟ್ಟ ಕುರುಬರು ತರಗು ವಕ್ಕಾ ಎಂಬ ಹೆಗ್ಗಳಿಕೆಯೊಂದಿಗೆ ಬೋಡು ಹಬ್ಬದ ಆಚರಣೆಯಲ್ಲಿ ತಮ್ಮನ್ನು ಗುರತಿಸಿಕೊಂಡಿರುತ್ತಾರೆ. 'ತರಗು' ಎಂದರೆ ಗುಡಿಸಲು ಉಪಯೋಗಿಸುವ ಕುರುಚಲು ಗಿಡ. ಹಬ್ಬಕ್ಕೆ ಮುನ್ನ ದೇವಸ್ಥಾನದ ಆವರಣವನ್ನು ಶುಚಿಗೊಳಿಸುವುದು ಮತ್ತು ಬಿದಿರಿನಿಂದ ತಯಾರಿಸುವ ಕುದುರೆಗೆ ಶೃಂಗಾರ ಮಾಡುವುದು ತರಗು ವಕ್ಕಾ ಬೊಟ್ಟ ಕುರುಬರ ಹಬ್ಬದ ಸೇವೆಯಾಗಿದೆ.



ಹಬ್ಬವನ್ನು ಎರಡು ದಿನ ಆಚರಿಸಲಾಗುತ್ತದೆ. ಮೊದಲನೆ ದಿನ ಪಟ್ಟಣಿ, ಎರಡನೆ ದಿನ ಕುದುರೆ ತೆಗೆಯುವುದು. ಆ ದಿನ ಬೆಳಿಗ್ಗೆಯಿಂದ ಹಬ್ಬದ ಕಟ್ಟುಪಾಡಿಗೆ ಒಳಪಡುವ ಊರಿನವರು ಅನ್ನವನ್ನು ಬಿಟ್ಟು ಫಲಾಹಾರ ಸೇವಿಸುತ್ತಾರೆ.

ಹಾಗೆ ಪಟ್ಟಣಿಗೆ ಪೂರ್ವ ಸರಿಯಾಗಿ ಎಂಟು ದಿನದಿಂದ ಅನ್ವಯವಾಗುವಂತೆ ಪ್ರಾಣಿ ಹಕ್ಕಿಗಳನ್ನು ಸಂಹಾರ ಮಾಡದೆ ಮಾಂಸಾಹಾರ ತ್ಯಜಿಸಿ ಸಸ್ಯಾಹಾರಿಗಳಾಗಿ ದೇವರ ಕಟ್ಟು ಪಾಲಿಸುತ್ತಾರೆ. ಆ ದಿನ ಮಧ್ಯಾಹ್ನ ಊರಿನವರು ದೇವಸ್ಥಾನದಲ್ಲಿ ಸೇರಿ ಪೂಜೆಯ ಬಳಿಕ ದೇವಸ್ಥಾನ ಸನಿಹವಿರುವ ಅಂಬಲ (ದೇವರ ಪರಿಕರಗಳನ್ನು ಇಡುವ ಸ್ಥಳ ) ತೆರಳಿ ಹಬ್ಬಕ್ಕೆ ಉಪಯೋಗಿಸುವ ದೈವಿಕ ವಸ್ತುಗಳನ್ನು ಅಂದರೆ ಕಡತಲೆ, ತೂರೆಕೋಲು, ಬೆಳ್ಳಿಯ ಹರಕೆ ವಸ್ತುಗಳಾದ ಕುದುರೆ, ನಾಯಿ, ಮಗು, ತೊಟ್ಟಿಲು, ಹಸು, ಕರುಗಳು, ಶೂಲ, ಕಾಳು, ಕೈ, ಮೂಗು, ಕಿವಿ, ಬೆರಳು, ಕಣ್ಣು (ಶರೀರಕ್ಕೆ ಅಥವಾ ಸಾಕು ಪ್ರಾಣಿಗಳಿಗೆ ಅನಾರೋಗ್ಯವಾದಾಗ ದೇವರನ್ನು ಬೇಡಿ ಸರಿಪಡಿಸಿದ್ದಲ್ಲಿ ಹರಕೆ ಕೊಡುವುದಾಗಿ ಪ್ರಾರ್ಥಿಸಿಕೊಳ್ಳುತ್ತಾರೆ) ಮೊಗ (ದೇವರ ಮುಖವಾಡ) ಇತ್ಯಾದಿಗಳನ್ನು ಶುದ್ಧೀಕರಿಸಿ ಅಯ್ಯಪ್ಪ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸುತ್ತಾರೆ. ಬಳಿಕ ಬೇಟೆ ಕರುಂಬ ಸ್ಥಾನಕ್ಕೆ ಬೇಟೆ ನಾಯಿ (ಮಣ್ಣಿನಿಂದ ಮಾಡಿದ)ಯ ಹರಕೆ ಸಲ್ಲಿಸಿ ಭದ್ರಕಾಳಿ ದೇವಸ್ಥಾನಕ್ಕೆ ವಾಲಗದೊಂದಿಗೆ ತೆರಳುತ್ತಾರೆ.

ಅಲ್ಲಿ ಭದ್ರಕಾಳಿ ದೇವರನ್ನು ನೆನೆದು ಪೂಜೆ ಸಲ್ಲಿಸಿ ಬೋಟೆ ಕರುಂಬ ದೇವರ ಪ್ರೀತಿಗೆ ಪಾತ್ರವಾದ ನಾಯಿ (ಮಣ್ಣಿನಿಂದ ಕುಂಬಾರ ತಯಾರಿಸಿದ) ಅರ್ಪಿಸಿ, ಹಿಂದಿನ ಕಾಲದಲ್ಲಿ ಬೇಟೆಗೆ ತೆರಳುವಾಗ ಬೇಟೆಯಲ್ಲಿ ಸಾಕು ನಾಯಿಯು ಕಾಡು ಪ್ರಾಣಿಗಳ ಇರುವಿಕೆಯನ್ನು ಗ್ರಹಿಸಿ ಬೇಟೆಗಾರನಿಗೆ ಸಹಾಯ ಮಾಡುತ್ತಿತ್ತು ಎಂಬುದರ ಪ್ರತೀತಿ ಇದೆ. ಆದ್ದರಿಂದ ಬೇಟೆಗಾರರಿಗೆ ಶಕ್ತಿಯ ಪ್ರತೀತಿಯಾಗಿರುವ ಬೇಟೆ ಕರುಂಬ ದೇವರಿಗೆ ನಾಯಿಯನ್ನು ಅರ್ಪಿಸಲಾಗುತ್ತದೆ.

ಹರಕೆ ಹೊತ್ತ ಯುವಕರಲ್ಲಿ ಆದ್ಯತೆ ಮೇರೆಗೆ ಕುದುರೆತೆಗೆಯುವುದಕ್ಕೆ ಇಬ್ಬರನ್ನು ಆರಿಸಿ (ದೇವರ ಅನುವಾದ ಪಡೆದ ಇಬ್ಬರು) ಪುನಃ ಅಯ್ಯಪ್ಪ ದೇವಸ್ಥಾನಕ್ಕೆ ಬಂದು, ಹಣ್ಣು ಕಾಯಿ ಪಡೆದು, ದೇವಸ್ಥಾನದಲ್ಲಿ ಊಟಮಾಡಿ (ಭಕ್ತರ ಹರಕೆ ಧಾರೆಯಿಂದ ತಯಾರಿಸಿದ ಅಕ್ಕಿ, ಧಾನ್ಯ, ತರಕಾರಿಗಳಿಂದ) ಅಂದರೆ ಪಟ್ಟಣಿಗೆ ಎಂಟು ದಿನ ಪೂರ್ವ ತ್ಯಜಿಸಿದ ಮಾಂಸಾಹಾರವನ್ನು ಈ ಘಳಿಗೆಯಿಂದ ಪುನಃ ಸ್ವಾಹಾ ಮಾಡಬಹುದು ಎಂದು ಊರಿಗೆ ತಿಳಿಹೇಳುವ ಪ್ರತೀತಿ. (ಈ ಘಳಿಗೆಯಿಂದ ಬೇಟೆ ಮಾಡಬಹುದು ಎಂಬ ತಿಳುವಳಿಕೆ). "ಊರೇ ನಾಡೇ ತಕ್ಕರೆ, ಬಿಲ್ ಬುಡ್‌ಡಾ" ಎಂದು ಮೂರು ಭಾರಿ ಕೇಳಿ ಬಿದಿರಿನಿಂದ ಬಾಣವನ್ನು ಬಿಡುತ್ತಾರೆ. ಆ ಬಳಿಕ ಭಕ್ತರು ಮನೆಗಳಿಗೆ ತೆರಳಿ ವಿಶ್ರಾಂತಿ ಪಡೆಯುತ್ತಾರೆ.

ಮರುದಿನ ಬೆಳಿಗ್ಗೆಯಿಂದಲೇ ನಾನಾ ವೇಷಧಾರಿ ಭಕ್ತರು ಊರಿನ ಮನೆ ಮನೆ ತೆರಳಿ ಬೇಡುತ್ತಾ ದೇವರಿಗೆ ಕಾಣಿಕೆ ಪಡೆಯುತ್ತಾರೆ. ಹಿಂದಿನ ಪದ್ಧತಿಯನ್ವಯ ಊರಿನೊಳಗೆ ವಾಸಿಸುವ ಹರಕೆ ಹೊತ್ತ ಭಕ್ತರು ಮತ್ತು ಹೊರಗಿರುವ ಜೇನು ಕುರುಬರು ಮಾತ್ರ ವೇಷಧಾರಿಗಳಾಗಿ ಅಯ್ಯಪ್ಪ, ಭದ್ರಕಾಳಿ, ಬೇಟೆ ಕರುಂಬ ದೇವರನ್ನು ಹೊಗಳುತ್ತಾ ಕಾಣಿಕೆ ಬೇಡುತ್ತಾರೆ. "ಅಯ್ಯಪ್ಪ ದೇವರ ಮಕ್ಕಳು ನಾವು ದೂರಿ, ದೂರಿ, ಭದ್ರಕಾಳಿಯಮ್ಮನ ಮಕ್ಕಳು ನಾವು ದೂರಿ, ದೂರಿ, ನಾವು ಕಾಡು ಕುರುಬರ ಮಕ್ಕಳು ದೂರಿ, ದೂರಿ, ಕಾಣಿಕೆ ಗೀಣಿಕೆ ಕೇಳುವೆವು ದೂರಿ, ದೂರಿ" ಎಂದು ದೇವರನ್ನು ಹೊಗಳುತ್ತಾ ಹಾಡುತ್ತಾರೆ.



(ಆದರೆ ನಿಷ್ಠೆಯಿಲ್ಲದ ಮೂಡರಿಗೆ ಮೋಜಿನ, ಹಣ ಕೀಳುವ, ಹೆಂಗಸು-ಗಂಡಸರನ್ನು ಅವಮಾನಿಸಿ ಬೈಯ್ಯುವ ಹಿಡಿತವಿಲ್ಲದ ನಾಲಿಗೆಯ ಹೆಂಡ ಸರಾಯಿ ಕುಡಿತದ ಹಾಡಾಗಿ ಪರಿಣಮಿಸಿರುವುದು ವಿಪರ್ಯಾಸವೇ ಸರಿ.) ಬೇಡುವ ಹಬ್ಬವನ್ನು ಕುಂಡೆ ಹಬ್ಬವೆಂದು ಕಾಣಿಕೆ ಗೀಣಿಕೆ ಕೇಳುವೆವು ಎಂಬುದನ್ನು ಕೇಳುವುದು ಎಂದು ಅಸಹ್ಯವಾಗಿ ಹಾಡುತ್ತಾ ಬೇಡುವ ಹಬ್ಬಕ್ಕೆ ಕಳಂಕ ಪ್ರಾಯವಾಗಿರುತ್ತದೆ.

ಮಧ್ಯಾಹ್ನ ಎಲ್ಲಾ ವೇಷಧಾರಿ ಭಕ್ತರು ಅಯ್ಯಪ್ಪ, ಭದ್ರಕಾಳಿ, ಬೇಟೆ ಕರುಂಬ ದೇವಸ್ಥಾನಕ್ಕೆ ಬಂದು ಆವರಣದಲ್ಲಿ ದೇವರನ್ನು ಹೊಗಳುತ್ತಾ ವಾಲಗಕ್ಕೆ ಕುಣಿದು ದೇವರಿಗೆ ಹರಕೆ ಪೂಜೆ ಸಲ್ಲಿಸುತ್ತಾರೆ. ಸರಿ ಸುಮಾರು ಎರಡು ಗಂಟೆಗೆ ಕುದುರೆ ತೆಗೆಯಲು ಹರಕೆ ಹೊತ್ತ ಅನುವಾದ ಪಡೆದ ಇಬ್ಬರು ಯುವ ಭಕ್ತರು ಮಂಡೆ ತುಣಿ ಹಾಕಿ, ತರಗು ವಕ್ಕರಾದ ಬೇಟೆ ಕುರುಬರು ಶೃಂಗರಿಸಿದ ಬಿದಿರಿನ ಕುದುರೆಯನ್ನು, ಊರಿನ ತಕ್ಕ ಮುಖ್ಯಸ್ಥರು, ಹಿರಿಯರ ಆಶೀರ್ವಾದದೊಂದಿಗೆ ಅಂಬಲದಲ್ಲಿ ಪೂಜೆ ಸಲ್ಲಿಸಿ ದೇವರನ್ನು ನೆನೆದು ಭಂಡಾರ ಪೆಟ್ಟಿಗೆ, ಪಣಿಕರ ತೆಗೆಯುವ ಮೊಗದೊಂದಿಗೆ ಅಯ್ಯಪ್ಪ ದೇವಸ್ಥಾನಕ್ಕೆ ಆಗಮಿಸುತ್ತಾರೆ.

ಭದ್ರಕಾಳಿ ದೇವರ ಮೊಗಕ್ಕೆ ಮತ್ತು ಕುದುರೆಗೆ ಭಕ್ತರು ಪೂಜೆ ಸಲ್ಲಿಸಿದ ಬಳಿಕ, ಸುಮಾರು ನಾಲ್ಕು ಗಂಟೆಗೆ, ಮೊಗದೊಂದಿಗೆ ವಾಲಗ ಸಹಿತ ದೇವರ ಕಾಡಿನಲ್ಲಿರುವ ಭದ್ರಕಾಳಿ ದೇವಸ್ಥಾನಕ್ಕೆ ಪೂಜಾರಿ, ತಕ್ಕರು, ಊರಿನ ಹಿರಿಯರು ಹಾಗೂ ಭಕ್ತ ವೇಷಧಾರಿಗಳೊಂದಿಗೆ ಭದ್ರಕಾಳಿ ದೇವಸ್ಥಾನಕ್ಕೆ (ಗಂಡಸರಿಗೆ ಮಾತ್ರ ಅವಕಾಶವಿದೆ) ತೆರಳುತ್ತಾರೆ. ಮಾರ್ಗ ಮಧ್ಯ ಕಳೆದ ಎಂಟು ದಿನದಲ್ಲಿ ಪ್ರಾಣಿ, ಪಕ್ಷಿಗಳನ್ನು ತಿಳಿದೋ ತಿಳಿಯದೆಯೋ ಕೊಂದಿದ್ದರೆ ಹಾಗೂ ಮಾಂಸಾಹಾರ ಮಾಡಿ ದೇವರ ಕಟ್ಟುಪಾಡನ್ನು ಮುರಿದಿದ್ದರೆ ಅಂತ ಭಕ್ತರು ದೇವರನ್ನು ಪ್ರಾರ್ಥಿಸಿ, ಶೂಲ ಕಟ್ಟೆ ಪ್ರವೇಶಿಸಿ ಕ್ಷಮೆ ಬೇಡಿ ತಪ್ಪು ಹಣ ಸಲ್ಲಿಸಿ ಭದ್ರಕಾಳಿ ದೇವಸ್ಥಾನಕ್ಕೆ ತೆರಳುತ್ತಾರೆ.

ಪ್ರಸ್ತುತ ಇಲ್ಲಿನ ಕುಟುಂಬಸ್ಥರು ದೇವಕಾಡನ್ನು ಬಹಳ ಒಗ್ಗಟ್ಟಿನಿಂದ ಸಂರಕ್ಷಿಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿನ ದೇವಕಾಡಿನಲ್ಲಿ ವಿಶೇಷವಾದ ಹಬ್ಬದ ಆಚರಣೆ ಭಿನ್ನವಾಗಿದೆ. ದೇವಕಾಡಿನ ಸಂರಕ್ಷಣೆ ಇಲ್ಲಿನ ಗ್ರಾಮಸ್ಥರ ಆದ್ಯ ಕರ್ತವ್ಯವಾಗಿದೆ.

**ವಿದ್ಯಾ ಜಗದೀಶ್ ಪುತ್ತಾಮನೆ**
**ಸಂಶೋಧನಾ ಲೇಖಕಿ ಮತ್ತು ಗಾಯಕಿ**
**ಕಿರುಗೂರು, ಪೊನ್ನಂಪೇಟೆ ಕೊಡಗು**
**ಇಮೇಲ್:vidyavocal5@gmail.com**